**ಓ.ಎಸ್ ನಂ.1521/2013**
**ಡಿ.ಡಬ್ಲ್ಯೂಃ 3**

**ದಿನಾಂಕಃ10.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ವಾದಿ ಮತ್ತು ವಾದಿ ಪರ ವಕೀಲರು ಗೈರು ಹಾಜರಿರುತ್ತಾರೆ, ಆದ್ದರಿಂದ ಅವರ ಪರವಾದ ಪಾಟೀ ಸವಾಲು ಇಲ್ಲ ಎಂದು ಬರೆದುಕೊಳ್ಳಲಾಯಿತು.**

**ಪಾಟೀ ಸವಾಲುಃ ಶ್ರೀ. ವೆಂಕಟಚಲಪತಿ 3 ನೇ ಪ್ರತಿವಾದಿ ಪರ ವಕೀಲರಿಂದಃ-**

ನಾನು ಬಿ.ಇ. ಓದಿರುತ್ತೇನೆ. ವಾದಿ ಡಿಪ್ಲೋಮೋ ಇಂಜಿನಿಯರಿಂಗ್ ಓದಿರುತ್ತಾಳೆ. ನನ್ನ ತಮ್ಮ 2 ನೇ ಪ್ರತಿವಾದಿ ದಿಃ 11.11.2011 ರಂದು ಮನೆ ಬಿಟ್ಟು ಹೋದವನು ಇಲ್ಲಿಯವರೆಗೆ ಬಂದಿರುವುದಿಲ್ಲ ಮತ್ತು ಕಾಣೆಯಾಗಿರುತ್ತಾನೆ. 3 ನೇ ಪ್ರತಿವಾದಿ ಭವ್ಯ ಇವಳು 2 ನೇ ಪ್ರತಿವಾದಿಯ ಹೆಂಡತಿ. 2 ನೇ ಪ್ರತಿವಾದಿ ಮದುವೆಗಿಂತ ಮುಂಚೆಯೇ ಅಂಗವಿಕಲನಾಗಿದ್ದನು. ನನ್ನ ತಂದೆಯೇ 2 ನೇ ಪ್ರತಿವಾದಿಯ ಮದುವೆ ಮಾಡಿದ್ದರು ಎನ್ನುವುದು ನಿಜ. 2 ನೇ ಪ್ರತಿವಾದಿ ಮದುವೆಯಾದ ಮೇಲೆ 1 ವರ್ಷದವರೆಗೆ ಆತ ನಮ್ಮ ಜೊತೆ ವಾಸವಿದ್ದನು. 1 ವರ್ಷದ ನಂತರ 2010 ರಲ್ಲಿ 2 ನೇ ಪ್ರತಿವಾದಿಗೆ ನಮ್ಮ ತಂದೆ ಬೇರೆ ಬಾಡಿಗೆ ಮನೆ ಮಾಡಿಕೊಟ್ಟರು. 2 ನೇ ಪ್ರತಿವಾದಿ ಆತನ ಹೆಂಡತಿಯ ಮಾತು ಕೇಳಿ ಬೇರೆ ಮನೆ ಮಾಡಿಕೊಂಡನು. 2 ನೇ ಪ್ರತಿವಾದಿಗೆ ನಮ್ಮ ತಂದೆ ಕಾಮಕ್ಷಿಪಾಳ್ಯದಲ್ಲಿ ದಿನಸಿ ಅಂಗಡಿ ಹಾಕಿಕೊಟ್ಟಿದ್ದರು. ನಮ್ಮ ತಂದೆ 2 ನೇ ಪ್ರತಿವಾದಿಯ ಅಂಗಡಿಗೆ ದಿನಸಿ ಸಾಮಾನುಗಳನ್ನು ತಂದು ಹಾಕುತ್ತಿದ್ದರು. 2 ನೇ ಪ್ರತಿವಾದಿ ಬಾಡಿಗೆ ಮನೆಯಲ್ಲಿದ್ದಾಗ ಅಲ್ಲಿಂದ ಕಾಣೆಯಾಗಿದ್ದಾನೆ ಎನ್ನುವುದು ನಿಜ. 2 ನೇ ಪ್ರತಿವಾದಿ ಕಾಣೆಯಾದ ಮೇಲೆ ನಮ್ಮ ತಂದೆ 2 ನೇ ಪ್ರತಿವಾದಿ ಹೆಂಡತಿಯ ಜೊತೆ ಇದ್ದರು ಎಂದರೆ ಸಾಕ್ಷಿ ಅವರು ಅವರ ಮನೆಗೆ ಹೋಗಿ ಬರುತ್ತಿದ್ದರು ಎನ್ನುತ್ತಾರೆ. 2 ನೇ ಪ್ರತಿವಾದಿ ಕಾಣೆಯಾದ ಮೇಲೆ ಆ ಅಂಗಡಿಯನ್ನು ನನ್ನ ತಂದೆಯೇ ನೋಡಿಕೊಳ್ಳುತ್ತಿದ್ದ ಎಂದರೆ ಸಾಕ್ಷಿ ನಮ್ಮ ತಂದೆಯ ಜೊತೆ ಆ ಅಂಗಡಿಯನ್ನು ನಾನು ಕೂಡ ನೋಡಿಕೊಳ್ಳುತ್ತಿದ್ದೆ ಎನ್ನುತ್ತಾನೆ. ನಾನು ನಮ್ಮ ತಂದೆಗೆ ಅಂಗಡಿ ನೋಡಿಕೊಳ್ಳಲು ಹಣಕಾಸಿನ ಸಹಾಯ ಮಾಡುತ್ತಿದ್ದೆನು. ನಾನು ಹಣಕಾಸಿನ ಸಹಾಯ ಮಾಡುತ್ತಿದ್ದ ಬಗ್ಗೆ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ನಾನು ನನ್ನ ತಂದೆಗೆ ಯಾವುದೇ ರೀತಿಯ ಹಣಕಾಸಿನ ಸಹಾಯ ಮಾಡಿಲ್ಲ ಎನ್ನುವುದು ಸರಿಯಲ್ಲ.

ಓ.ಎಸ್ ನಂ.**1521/2013**
ಡಿ.ಡಬ್ಲ್ಯೂ: **3**

2 ನೇ ಪ್ರತಿವಾದಿ ಕಾಣೆಯಾದ ನಂತರ ನನ್ನ ತಂದೆ 1 ವರ್ಷಗಳ ಕಾಲ ಬದುಕಿದ್ದರು. ದಾವಾ ಆಸ್ತಿ ಐಟಂ ನಂ.1 ರ ಬಗ್ಗೆ ನನ್ನ ತಂದೆ 3 ನೇ ಪ್ರತಿವಾದಿಗೆ ದಾನಪತ್ರ ಬರೆದುಕೊಟ್ಟಿರುವ ವಿಷಯ ನನಗೆ ಗೊತ್ತಿದೆ. 3 ನೇ ಪ್ರತಿವಾದಿ ಹಳ್ಳಿಯಲ್ಲಿ ಬೆಳೆದು ಬಂದವಳು ಎನ್ನುವುದು ನಿಜ. ನಮ್ಮ ತಂದೆ ತೀರಿಕೊಂಡ ಮೇಲೆ 3 ನೇ ಪ್ರತಿವಾದಿ ಬಿ.ಟಿ.ಎಂ ಲೇಔಟ್ ನ ಮನೆಯ ಮೊದಲನೇ ಮಹಡಿ ಮನೆಯ ಭೋಗ್ಯದ ಹಣದಿಂದ ಜೀವನ ಮಾಡುತ್ತಿದ್ದಾಳೆ. ಆ ಬೋಗ್ಯವನ್ನು ನಮ್ಮ ತಂದೆ ಜೀವಂತವಿರುವಾಗಲೇ ಮಾಡಿದ್ದು ಎನ್ನುವುದು ನಿಜ. ಭೋಗ್ಯ ಪತ್ರವನ್ನು ನಾನು ನೋಡಿದ್ದೇನೆ. ಭೋಗ್ಯ ಪತ್ರದ ಪ್ರಕಾರ ಬೋಗ್ಯದ ಹಣ ನನ್ನ ತಂದೆಗೆ ಹೋಗಿದೆ ಎನ್ನುವುದು ನಿಜ. ಆ ಭೋಗ್ಯದಿಂದ ಬಂದ ಹಣವನ್ನು ನನ್ನ ತಂದೆ ಅಂಗಡಿ ನಡೆಸಲು ವಿನಿಯೋಗಿಸಿದ್ದಾರೆ. ನನ್ನ ತಂದೆ ತೀರಿಕೊಂಡ ಮೇಲೆ ದಿನಸಿ ಅಂಗಡಿ ಮುಚ್ಚಿದ್ದಾರೆ ಎಂದರೆ ಸಾಕ್ಷಿ 1 ವರ್ಷದ ನಂತರ ಮುಚ್ಚಿದ್ದಾರೆ ಎನ್ನುತ್ತಾರೆ. 3 ನೇ ಪ್ರತಿವಾದಿಗೆ ಯಾರದೇ ಸಹಾಯ ಇರದೇ ಕಾರಣ ದಿನಸಿ ಅಂಗಡಿಯನ್ನು ಮುಚ್ಚಿದ್ದಾಳೆ ಎನ್ನುವುದು ಸರಿಯಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯ ಕೇಳಿದರು, ಸಮಯ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಬಿ.ಪಿ.ದೇವಮಾನೆ )**
**1ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು.**

ಓ.ಎಸ್ ನಂ.**1521/2013**
ಡಿ.ಡಬ್ಲ್ಯೂಃ **3**

**ದಿನಾಂಕಃ16.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 3 ನೇ ಪ್ರತಿವಾದಿ ಪರ ಶ್ರೀ. ವೆಂಕಟಚಲಪತಿ ವಕೀಲರಿಂದಃ-**

ದಾವಾ ಆಸ್ತಿ ಐಟಂ ನಂ.1 ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಆಗಿದೆ ಎನ್ನುವುದು ಸರಿಯಲ್ಲ. ನಿಡಿ.35 ಇದು ನನ್ನ ತಂದೆ ಮಾಡಿ ಇಟ್ಟಿರುವ ವಿಲ್ ಎನ್ನುವುದು ನಿಜ. 2 ನೇ ಪ್ರತಿವಾದಿ ಕಾಣೆಯಾದ ಮೇಲೆ ಆತನ ಹೆಂಡತಿ 3 ನೇ ಪ್ರತಿವಾದಿಯನ್ನು ನನ್ನ ತಂದೆಯೇ ನೋಡಿಕೊಳ್ಳುತ್ತಿದ್ದ ಎನ್ನುವುದು ನಿಜ. ನನ್ನ ತಂದೆಗೆ ಹೃದಯಘಾತ ಆದ ಮೇಲೆ ಆತ ಅನಾರೋಗ್ಯದಿಂದ ಬಳಲುತ್ತಿದ್ದ ಎನ್ನುವುದು ನಿಜ. ನನ್ನ ತಂದೆ ಕಾಯಿಲೆಯಿಂದ ಬಳಲುತ್ತಿದ್ದುದ್ದರಿಂದ 3 ನೇ ಪ್ರತಿವಾದಿಯನ್ನು ನೋಡಿಕೊಳ್ಳಲು ಯಾರು ಇರಲಿಲ್ಲ ಎಂದರೆ ಸಾಕ್ಷಿ ನಾನೇ ನೋಡಿಕೊಳ್ಳುತ್ತಿದ್ದೆ ಎನ್ನುತ್ತಾರೆ. 3 ನೇ ಪ್ರತಿವಾದಿ ನಮ್ಮ ಮನೆಯಲ್ಲಿ ಇರಲಿಲ್ಲ ಎನ್ನುವುದು ನಿಜ. 2 ನೇ ಪ್ರತಿವಾದಿ ಕಾಣೆಯಾದ ನಂತರ ಆತನ ಹೆಂಡತಿ 3 ನೇ ಪ್ರತಿವಾದಿಯನ್ನು ನಾನು ನೋಡಿಕೊಳ್ಳುತ್ತಿದ್ದೆ ಎಂದು ನನ್ನ ಪ್ರತಿವಾದ ಪತ್ರದಲ್ಲಿ ಹೇಳಿರುವುದಿಲ್ಲ. ನನ್ನ ತಂದೆ ಜೀವಂತವಿದ್ದಾಗ ನಾನು ನನ್ನ ತಂದೆಯನ್ನು ಮತ್ತು 3 ನೇ ಪ್ರತಿವಾದಿಯನ್ನು ನಾನು ನೋಡಿಕೊಳ್ಳುತ್ತಿರಲಿಲ್ಲ ಎನ್ನುವುದು ಸರಿಯಲ್ಲ. ನನ್ನ ತಂದೆಗೆ ಆರೋಗ್ಯ ಸರಿಯಿಲ್ಲದಿದ್ದಾಗ 3 ನೇ ಪ್ರತಿವಾದಿ ಆತನನ್ನು ನೋಡಿಕೊಳ್ಳುತ್ತಿದ್ದಳು ಎನ್ನುವುದು ಸರಿಯಲ್ಲ. ತಾನು ತೀರಿಕೊಂಡ ಮೇಲೆ ತನ್ನ ಸೊಸೆ 3 ನೇ ಪ್ರತಿವಾದಿಯನ್ನು ಬೇರೆ ಯಾರು ನೋಡಿಕೊಳ್ಳುವುದಿಲ್ಲ ಎಂದು ಭಾವಿಸಿ ನನ್ನ ತಂದೆ ದಾವಾ ಐಟಂ ನಂ.1 ರ ಆಸ್ತಿಯನ್ನು 3 ನೇ ಪ್ರತಿವಾದಿಗೆ ದಾನಪತ್ರ ಬರೆದುಕೊಟ್ಟಿದ್ದಾನೆ ಎನ್ನುವುದು ಸರಿಯಲ್ಲ. ಸದರಿ ದಾನಪತ್ರ ಬರೆದುಕೊಡುವ ಕಾಲಕ್ಕೆ ನನ್ನ ತಂದೆ ಮಾನಸಿಕವಾಗಿ ಆರೋಗ್ಯವಂತರಾಗಿದ್ದರು ಎನ್ನುವುದು ಸರಿಯಲ್ಲ. ನನ್ನ ತಂದೆಗೆ ಅನಾರೋಗ್ಯವಾಗಿದ್ದಾಗ ಆತ ನಮ್ಮ ಮನೆಯಲ್ಲಿ ಇದ್ದನು. ನನ್ನ ತಂದೆಯನ್ನು ನಾನೇ ನೋಡಿಕೊಳ್ಳುತ್ತಿದ್ದೆನು. ನನ್ನ ಹೆಂಡತಿ ಗೃಹಿಣಿಯಾಗಿದ್ದಾಳೆ. ನಾನು ಇಲ್ಲದೆ ಇದ್ದಾಗ ನನ್ನ ತಂದೆಯನ್ನು ನನ್ನ ಹೆಂಡತಿ ನೋಡಿಕೊಳ್ಳುತ್ತಿದ್ದಳು.

ದಿಃ 04.12.2012 ರಂದು ನಿಪಿ.21 ದಾನಪತ್ರ ಬರೆದು ಕೊಡುವ ಕಾಲಕ್ಕೆ ನನ್ನ ತಂದೆ ನಮ್ಮ ಮನೆಯಲ್ಲಿ ನನ್ನ ಜೊತೆ ಇರಲಿಲ್ಲ. ಆ ದಿವಸ ನಾನು 3 ನೇ ಪ್ರತಿವಾದಿಯ ಜೊತೆ ನನ್ನ ತಂದೆಯನ್ನು ಆರೋಗ್ಯ ತಪಾಸಣೆಗೆ ಕಳುಹಿಸಿದ್ದೆನು. ಆ ದಿವಸ ಆರೋಗ್ಯ ತಪಾಸಣೆಗೆ ನನ್ನ ತಂದೆಯನ್ನು ಕಳುಹಿಸಿದ್ದೆ ಎನ್ನುವ ಬಗ್ಗೆ ಯಾವುದೇ ದಾಖಲೆ ಹಾಜರು ಮಾಡಿರುವುದಿಲ್ಲ. ನನ್ನ ತಂದೆ ದಿಃ 02.11.2012 ರಂದು ಆಸ್ಪತ್ರೆಯಿಂದ ಡಿಸಾರ್ಜ್ ಆಗಿದ್ದನು ಎನ್ನುವುದು ನಿಜ. ದಿಃ 02.11.2012 ರಂದು ನನ್ನ ತಂದೆ ಆರೋಗ್ಯವಾಗಿದ್ದಾನೆ

ಎಂದು ಆಸ್ಪತ್ರೆಯವರು ಡಿಸಾರ್ಜ್ ಮಾಡಿದ್ದರು ಎನ್ನುವುದು ಸರಿಯಲ್ಲ. ಆ ದಿನದ ಡಿಸಾರ್ಜ್ ಸಮ್ಮರಿ ಪ್ರಕಾರ ಕೆಲವು ಔಷಧಿಗಳನ್ನು ತೆಗೆದುಕೊಳ್ಳಲು ಹೇಳಿ ಮನೆಗೆ ಕಳುಹಿಸಿಕೊಟ್ಟಿದ್ದರು ಎನ್ನುವುದು ನಿಜ. ಆ ದಿವಸ ಡಿಸಾರ್ಜ್ ಆದ ನಂತರ ನನ್ನ ತಂದೆ 3 ನೇ ಪ್ರತಿವಾದಿಯ ಜೊತೆ ವಾಸವಾಗಿದ್ದರು ಎನ್ನುವುದು ಸರಿಯಲ್ಲ. ಕಾಮಕ್ಷಿಪಾಳ್ಯದ 3 ನೇ ಪ್ರತಿವಾದಿಯ ಮನೆಯಲ್ಲಿ ನನ್ನ ತಂದೆ ಮೃತಪಟ್ಟಿದ್ದಾನೆ. ನನ್ನ ತಂದೆ ಮರಣ ಹೊಂದುವ 1 ವರ್ಷದ ಮುಂಚೆಯಿಂದ ನಾನು ಆತನನ್ನು ನೋಡಿಕೊಳ್ಳುತ್ತಿರಲಿಲ್ಲ, ಆದ್ದರಿಂದ ಆತ 3 ನೇ ಪ್ರತಿವಾದಿಯ ಮನೆಯಲ್ಲಿ ವಾಸವಾಗಿದ್ದ ಎನ್ನುವುದು ಸರಿಯಲ್ಲ. ನನ್ನ ತಂದೆ 3 ನೇ ಪ್ರತಿವಾದಿಯನ್ನು, 2 ನೇ ಪ್ರತಿವಾದಿಗೆ ಮದುವೆ ಮಾಡಿಸಿದ್ದ ಮತ್ತು 2 ನೇ ಪ್ರತಿವಾದಿ ಕಾಣೆಯಾದ ಮೇಲೆ ಅವಳನ್ನು ನೋಡಿಕೊಳ್ಳುವವರು ಯಾರು ಇರದಿದ್ದುದ್ದಕ್ಕೆ ನನ್ನ ತಂದೆ ಅವಳ ಜೊತೆಯಲ್ಲಿ ವಾಸವಾಗಿದ್ದ ಎನ್ನುವುದು ಸರಿಯಲ್ಲ. ದಾವಾ ಆಸ್ತಿ ಐಟಂ ನಂ.1 ರಲ್ಲಿ ಭಾಗ ಕೇಳುವ ಉದ್ದೇಶದಿಂದ 3 ನೇ ಪ್ರತಿವಾದಿಯ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ. ದಾವಾ ಐಟಂ ನಂ.1 ರ ಆಸ್ತಿ ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಆಗಿದ್ದುದ್ದರಿಂದ ಆತ ಅದನ್ನು ತನ್ನ ಸೊಸೆ 3 ನೇ ಪ್ರತಿವಾದಿಗೆ ದಾನಪತ್ರ ಬರೆದುಕೊಟ್ಟಿದ್ದಾನೆ ಎನ್ನುವುದು ಸರಿಯಲ್ಲ.

ದಾವಾ ಐಟಂ ನಂ.2 ರ ಆಸ್ತಿಯನ್ನು ನನ್ನ ತಂದೆ ಮುನಿರತ್ನಮ್ಮ ಎನ್ನುವವರ ಜಿ ಪಿ ಎ ಹೋಲ್ಡರ್ ಆಗಿ ನನ್ನ ಹೆಸರಿಗೆ ನಿಡಿ.36 ರ ಪ್ರಕಾರ ಕ್ರಯಪತ್ರ ಮಾಡಿಕೊಟ್ಟಿದ್ದಾನೆ ಎನ್ನುವುದು ನಿಜ. ನಿಡಿ.36 ರಲ್ಲಿ ಕಾಣಿಸಿರುವ ಕ್ರಯದ ಹಣವನ್ನು ಚೆಕ್ ಮುಖಾಂತರ ಮತ್ತು ಉಳಿದ ಹಣವನ್ನು ನಗದು ರೂಪದಲ್ಲಿ ಕೊಟ್ಟಿರುತ್ತೇನೆ. ಚೆಕ್ ಮುಖಾಂತರ ಹಣ ಕೊಟ್ಟ ಬಗ್ಗೆ ನಿಡಿ.36 ಕ್ರಯಪತ್ರದಲ್ಲಿ ಬರೆದಿರುವುದಿಲ್ಲ. ನಿಡಿ.36 ಕ್ರಯಪತ್ರದಲ್ಲಿ ಪೂರ್ತಿ ಕ್ರಯದ ಹಣ 13 ಲಕ್ಷ 30 ಸಾವಿರ ರೂಪಾಯಿಗಳನ್ನು ನಗದು ರೂಪದಲ್ಲಿ ಕೊಡಲಾಗಿದೆ ಎಂದು ಬರೆಯಲಾಗಿದೆ ಎನ್ನುವುದು ಸರಿಯಲ್ಲ. ನನ್ನ ತಂದೆ ಮುನಿರತ್ನಮ್ಮಳಿಗೆ ಹಣ ಕೊಟ್ಟು ಅವಳಿಂದ ಜಿ ಪಿ ಎ ಬರೆಯಿಸಿಕೊಂಡಿದ್ದರು ಎಂದರೆ ಸಾಕ್ಷಿ ನನ್ನ ತಂದೆ ಹಣ ಕೊಟ್ಟಿದ್ದ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಆ ಜಿ ಪಿ ಎ ಜೊತೆಗೆ ಅವಿಢವಿಟ್ ಅಥವಾ ಅಗ್ರಿಮೆಂಟ್ ಇರಲಿಲ್ಲ. ನನ್ನ ತಂದೆ ಸದರಿ ಆಸ್ತಿಯನ್ನು ಮೊದಲೇ ಮುನಿರತ್ನಮ್ಮಳಿಂದ ಖರೀದಿಸಿ ಜಿ ಪಿ ಎ ಮಾಡಿಟ್ಟುಕೊಂಡಿದ್ದರಿಂದ ಆ ಬಗ್ಗೆ ಒಂದು ದಾಖಲೆ ಇರಲಿ ಎನ್ನುವ ಉದ್ದೇಶದಿಂದ ನನ್ನ ಹೆಸರಿಗೆ ನನ್ನಿಂದ ಯಾವುದೇ ಹಣ ಪಡೆಯದೆ ಕ್ರಯಪತ್ರ ಮಾಡಿಕೊಟ್ಟಿದ್ದಾರೆ ಎನ್ನುವುದು ಸರಿಯಲ್ಲ.

ದಿಃ 22.05.2008 ನನ್ನಿಂದ ನನ್ನ ತಂದಗೆ ಹಣ ಕೊಟ್ಟಿರುವ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ ಎನ್ನುವುದು ಸರಿಯಲ್ಲ. ನನ್ನ ತಂದೆ ದಾಖಲೆ ಮಾಡುವುದುಕೋಸ್ಕರ ನನ್ನ ಹೆಸರಿಗೆ ಕ್ರಯಪತ್ರ ಮಾಡಿದ್ದರು ಸಹಾ ಅದು ನನ್ನ ಆಸ್ತಿ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ದಾವಾ ಆಸ್ತಿಯಲ್ಲಿ ಐಟಂ ನಂ.2 ನ್ನು ಬರೆದುಕೊಟ್ಟಾಗ ಅದು ಖಾಲಿ ಜಾಗವಾಗಿತ್ತು, ಈಗ ಅದರಲ್ಲಿ ನಾನು 5 ಮನೆಗಳನ್ನು ಕಟ್ಟಿದ್ದೇನೆ. 2008 ರ ನಂತರ ಆ ಮನೆಗಳನ್ನು ಕಟ್ಟಿದ್ದೇನೆ. ದಾವಾ ಐಟಂ ನಂ.2 ರ ಆಸ್ತಿಯಲ್ಲಿನ ಮನೆಗಳನ್ನು ನನ್ನ ತಂದೆಯೇ ಕಟ್ಟಿದ್ದಾನೆ ಎನ್ನುವುದು ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ ಪ್ಯಾರಾ ನಂ.11 ರಿಂದ 13 ರಲ್ಲಿ ಕಾಣಿಸಿರುವ ಹಣ ಕೊಟ್ಟಿರುವ ವಿಷಯ ದಾವಾ ಆಸ್ತಿ ಐಟಂ ನಂ.2 ರ ಮನೆಗಳಿಂದ ಬಂದ ಬಾಡಿಗೆ ಹಣವನ್ನು ನನ್ನ ತಂದೆಗೆ ಕೊಟ್ಟಿದ್ದೇನೆ ಎನ್ನುವುದು ಸರಿಯಲ್ಲ. ದಾವಾ ಆಸ್ತಿ ಐಟಂ ನಂ.2 ರಲ್ಲಿ ಕಟ್ಟಿರುವ ಮನೆ ಕಟ್ಟಲು ಪ್ಲಾನ್ ಸ್ಯಾಂಕ್ಷನ್ ಮಾಡಿಸಿಕೊಂಡಿದ್ದೇನೆ. ದಾವಾ ಆಸ್ತಿ ಐಟಂ ನಂ.2 ರ ಆಸ್ತಿ ನನ್ನ ತಂದೆಯ ಸ್ವಯಾರ್ಜಿತ ಆಸ್ತಿವಾಗಿದ್ದು ಮತ್ತು ನನ್ನ ಹೆಸರಿಗೆ ನಾಮಮಾತ್ರ ಕ್ರಯಪತ್ರ ಬರೆದುಕೊಟ್ಟಿದ್ದಾರೆ ಎನ್ನುವುದು ಸರಿಯಲ್ಲ.

ದಾವಾ ಆಸ್ತಿ ಐಟಂ ನಂ.6 ಮತ್ತು 7 ಇವುಗಳನ್ನು ನಾನು ನನ್ನ ತಂದೆಯ ಹೆಸರಿನಲ್ಲಿ ಖರೀದಿಸಿದ್ದೇನೆ ಎಂದು ತೋರಿಸಲು ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ದಾವಾ ಆಸ್ತಿ ಐಟಂ ನಂ.6 ಮತ್ತು 7 ಇವುಗಳನ್ನು ಖರೀದಿಸುವಾಗ ನನ್ನ ತಂದೆಗೆ ತಿಂಗಳಿಗೆ ರೂ.15,000/- ಗಳು ಸಂಬಳ ಬರುತ್ತಿತ್ತು. ದಾವಾ ಆಸ್ತಿ ಐಟಂ ನಂ.6 ಮತ್ತು 7 ಇವುಗಳನ್ನು ಖರೀದಿಸುವ ಕಾಲಕ್ಕೆ ನನ್ನ ತಂದೆಗೆ ಸಾಕಷ್ಟು ಆದಾಯವಿತ್ತು ಮತ್ತು ನನ್ನಿಂದ ಹಣ ಪಡೆಯುವ ಅವಶ್ಯಕತೆ ಇರಲಿಲ್ಲ ಎನ್ನುವುದು ಸರಿಯಲ್ಲ. ದಾವಾ ಆಸ್ತಿ ಐಟಂ ನಂ.10 ನ್ನು ಒಟ್ಟು ಕುಟುಂಬದ ಆದಾಯದಿಂದ ನನ್ನ ತಾಯಿಯ ಹೆಸರಿಗೆ ಖರೀದಿಸಲಾಗಿದೆ ಎಂದು ನಾನು ಹೇಳುತ್ತಿದ್ದೇನೆ ಎನ್ನುವುದು ನಿಜ. ದಾವಾ ಆಸ್ತಿ ಐಟಂ ನಂ.12 ನ್ನು ದಿಃ 25.11.1996 ರಂದು ನನ್ನ ತಾಯಿ ತೀರಿಕೊಂಡ ಮೇಲೆ ನನ್ನ ತಂದೆ ಮಾರಾಟ ಮಾಡಿದ್ದಾನೆ ಎನ್ನುವುದು ನಿಜ. ದಾವಾ ಆಸ್ತಿ ಐಟಂ ನಂ.12 ನ್ನು ಮಾರಾಟ ಮಾಡಿದ ವಿಷಯ ನನಗೆ 1996 ರಲ್ಲಿ ಗೊತ್ತಿತ್ತು ಎನ್ನುವುದು ಸರಿಯಲ್ಲ.

ನಿಡಿ.21 ರಲ್ಲಿ ಸಾಕ್ಷಿಯ ಸಹಿಯನ್ನು ತೋರಿಸಿದಾಗ ಅದನ್ನು ನೋಡಿ ಗುರುತಿಸುತ್ತಾರೆ. ಅದನ್ನು 3 ನೇ ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ **ನಿಡಿ.21(ಬಿ)** ಎಂದು ಗುರುತಿಸಲಾಯಿತು. ನಿಡಿ.21 ಕ್ರಯಪತ್ರವನ್ನು ನಾನು, ನನ್ನ ತಮ್ಮ

ಮತ್ತು ತಂಗಿ ಸಹಿ ಮಾಡಿಕೊಟ್ಟಿದ್ದರು ಕೂಡ ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಾನು ಕೆಲಸಕ್ಕೆ ಸೇರಿಕೊಂಡ ಮೇಲೆ ನನ್ನ ತಂದೆ ಮಾಡುತ್ತಿದ್ದ ಎಲ್ಲಾ ವ್ಯವಹಾರಗಳು ನನಗೆ ಗೊತ್ತಿದ್ದವು. ನನ್ನ ತಂದೆ 3 ನೇ ಪ್ರತಿವಾದಿಯ ಪರವಾಗಿ ಬರೆದುಕೊಟ್ಟ ದಾನಪತ್ರದ ವಿಷಯ ಕೂಡ ನನಗೆ ಗೊತ್ತಿತ್ತು ಎನ್ನುವುದು ಸರಿಯಲ್ಲ. ನನ್ನ ತಂದೆ ತೀರಿಕೊಳ್ಳುವ 2 ದಿವಸಗಳ ಮುಂಚೆ ದಾನಪತ್ರದ ವಿಷಯ ನನಗೆ ಗೊತ್ತಾಯಿತು. ಆ ದಾನಪತ್ರದ ಬಗ್ಗೆ ಏನು ಕ್ರಮಕೈಗೊಂಡಿದ್ದೀರಿ ಎಂದರೆ ಸಾಕ್ಷಿ ಈ ದಾವೆ ದಾಖಲಿಸಿದ್ದೇನೆ ಎನ್ನುತ್ತಾರೆ. ದಾವಾ ಐಟಂ ನಂ.1 ರ ಆಸ್ತಿಯನ್ನು ಹೊರತುಪಡಿಸಿ ಉಳಿದೆಲ್ಲಾ ಆಸ್ತಿಗಳಲ್ಲಿ ನನ್ನ ತಮ್ಮ 2 ನೇ ಪ್ರತಿವಾದಿಗೆ ಬರಬೇಕಾಗಿದ್ದ ಭಾಗದ ಆಸ್ತಿ ಆತನ ಹೆಂಡತಿ 3 ನೇ ಪ್ರತಿವಾದಿಗೆ ಬರಬೇಕಾಗುತ್ತದೆ ಎನ್ನುವುದು ಸರಿಯಲ್ಲ. ನಿಡಿ.69 ಮೆಡಿಕಲ್ ರಿಪೋರ್ಟ್ ಪ್ರಕಾರ ನನ್ನ ತಂದೆಯ ಆರೋಗ್ಯದ ಸ್ಥಿತಿ ಸಾಮಾನ್ಯವಾಗಿತ್ತು ಎನ್ನುವುದು ಸರಿಯಲ್ಲ. ನಾನು ಹಾಜರು ಪಡಿಸಿರುವ ವೈದ್ಯಕೀಯ ದಾಖಲೆಗಳ ಪ್ರಕಾರ ನನ್ನ ತಂದೆಗೆ ಯಾವುದೇ ಗಂಭೀರ ಸ್ವರೂಪದ ಆರೋಗ್ಯ ಸರಿಯಿರಲಿಲ್ಲ ಎನ್ನುವುದು ಸರಿಯಲ್ಲ.

**ಮರುವಿಚಾರಣೆ: ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಬಿ.ಪಿ.ದೇವಮಾನೆ )**
**1ನೇ ಅಪರ ನಗರ ಸಿವಿಲ್ ಮತ್ತು ಸತ್ರ**
**ನ್ಯಾಯಾಧೀಶರು, ಬೆಂಗಳೂರು.**